ಬ್ಯಾಡ್ ಎನ್ನದೆ ಬ್ಯೂಟಿಫುಲ್ ಎನ್ನುತ್ತಾರೆ. ಆದರೆ ಅದೇ ಕನ್ನಡ ಮಾಧ್ಯಮದ ಸೆಕ್ಷನ್‌ಗಳಿಗೆ ಬಂದರೆ ಆ ಅಧ್ಯಾಪಕರು ಡಿ. ಎಂದರೆ ಡಿಯರ್ ಎನ್ನದೆ ಡ್ಯಾಮ್ ಎಂದೂ ಎಫ್. ಎಂದರೆ ಫೈನ್ ಎನ್ನದೆ ಫೂಲ್ಸ್ ಎಂದೂ ವ್ಯಾಖ್ಯಾನಿಸುತ್ತಾರೆ. ಇದು ನಮ್ಮ ಅಧ್ಯಾಪಕರು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳನ್ನು ಕಾಣುವ ರೀತಿ. ಶಾಲೆಗೆ ಸೇರುವಾಗಲೇ ಅವರು ದಡ್ಡರೆಂದು ಪರಿಗಣಿಸಲ್ಪಟ್ಟುಬಿಡುತ್ತಾರೆ. ಬುದ್ಧಿವಂತ ವಿದ್ಯಾರ್ಥಿಗಳಿಗೆ ಕನ್ನಡ ತೆಗೆದುಕೊಳ್ಳಬಾರದೆಂದು ಉಪದೇಶಿಸಲಾಗುತ್ತದೆ. ದಡ್ಡರೂ, ಬಾಯಿಬಿಡಲು ಬರದವರೂ ಆದ ಅಧ್ಯಾಪಕರನ್ನು ಕನ್ನಡ ಮಾಧ್ಯಮದ ತರಗತಿಗಳಿಗೆ ಕಳಿಸಲಾಗುತ್ತದೆ. ಅಧ್ಯಾಪಕರಿಲ್ಲದೆ ತರಗತಿಗಳನ್ನು ಬಿಡಬೇಕಾದ ಪ್ರಸಂಗ ಬಂದರೆ ಕನ್ನಡ ಮಾಧ್ಯಮದ ತರಗತಿಗಳನ್ನು ಬಿಡಲಾಗುತ್ತದೆ; ಇಂಗ್ಲಿಷ್ ಮಾಧ್ಯಮದ ತರಗತಿಗಳು ನಡೆಯುತ್ತವೆ. ಈ ಭೇದಭಾವನೆಗಳ ಪಟ್ಟಿಯನ್ನು ಬೆಳೆಸುತ್ತ ಹೋಗಬಹುದು. ಇದರ ಒಟ್ಟು ಅಭಿಪ್ರಾಯವೆಂದರೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕನ್ನಡ ಮಾಧ್ಯಮದ ಬೆಳವಣಿಗೆಗೆ ಅವಕಾಶ ಕೊಡುತ್ತಿಲ್ಲ. ಶಾಲೆ ಕಾಲೇಜುಗಳಲ್ಲಿ ಸೀಟು ಸಿಕ್ಕದವರನ್ನು ಮಾತ್ರವೇ ಎಷ್ಟೋ ಕಡೆ ಕನ್ನಡ ಮಾಧ್ಯಮಕ್ಕೆ ತುಂಬಲಾಗುತ್ತದೆ. ಫಲಿತಾಂಶಗಳನ್ನು ಪ್ರಕಟಿಸುವಾಗ ಈ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿ ತೇರ್ಗಡೆ ಆಗದಿದ್ದಾಗಲೂ ಕನ್ನಡ ಮಾಧ್ಯಮದ ಫಲಿತಾಂಶ ತೃಪ್ತಿಕರವಲ್ಲವೆಂದು ದೊಡ್ಡದಾಗಿ ಪ್ರಕಟಿಸಲಾಗುತ್ತಿದೆ. ಇಂಗ್ಲಿಷ್ ದಾಸ್ಯದಿಂದ ತಪ್ಪಿಸಿಕೊಳ್ಳಲಾಗದ ಪೋಷಕರು, ಅಧ್ಯಾಪಕರು, ಅಧಿಕಾರಿಗಳು ಕನ್ನಡ ಮಾಧ್ಯಮದ ಶಿಕ್ಷಣವನ್ನು ಕೊಲ್ಲುತ್ತಿದ್ದಾರೆ. ಸರ್ಕಾರ ಮೂಕ ಪ್ರೇಕ್ಷಕನಾಗಿ ಇದನ್ನು ಪ್ರೋತ್ಸಾಹಿಸುತ್ತಿದೆ. ಪಶ್ಚಿಮಬಂಗಾಳ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಅಲ್ಲಿನ ಭಾಷೆಗಳಿಗೆ ಸರ್ಕಾರ ಕಲ್ಪಿಸಿರುವ ಸ್ಥಾನಮಾನಗಳನ್ನು, ಪ್ರೋತ್ಸಾಹವನ್ನು ಕರ್ನಾಟಕ ಸರ್ಕಾರ ತನ್ನ ಶಿಕ್ಷಣ ವ್ಯವಸ್ಥೆಯಲ್ಲಿ ನೀಡಿಲ್ಲ.

**'ಬಹು ಭಾಷೆಗಳ ಈ ದೇಶದಲ್ಲಿ ಒಂದು ಸಂಪರ್ಕ ಭಾಷೆಯ ಅಗತ್ಯವಿದೆ. ಆ ಭಾಷೆಯಾವುದಾಗಿರಬೇಕು ಎಂಬ ಪ್ರಶ್ನೆ ಇನ್ನೂ ಜೀವಂತವಾಗಿದೆ... ಹಿಂದಿಯನ್ನು ಇಡೀ ದೇಶದ ಮೇಲೆ ಹೇರುವ ಪ್ರಯತ್ನಗಳಾಗುತ್ತಿವೆ'**

## ಅಂಕಗಳ ಜಿಂಕೆ

ಶಿಕ್ಷಣವ್ಯವಸ್ಥೆಯಲ್ಲಿ ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದೀ ಭಾಷೆಗಳೊಡನೆ ಮುಖ್ಯವಾಗಿ ಸ್ಪರ್ಧಿಸಬೇಕಾಗಿದೆ. ಹಿಂದಿಯನ್ನು ಮೂರನೆಯ ಭಾಷೆಯನ್ನಾಗಿ ಅ–ಪರಿಕ್ಷಾ ವಿಷಯವನ್ನಾಗಿ ಓದಿದರೂ ಅದೇ ಆಧಾರದ ಮೇಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹಿಂದಿಯನ್ನು ಆರಿಸಿಕೊಳ್ಳುವ ಅವಕಾಶವಿರುವುದರಿಂದ ಬಹುಸಂಖ್ಯೆಯ ವಿದ್ಯಾರ್ಥಿಗಳು ಕನ್ನಡವನ್ನು ಬಿಟ್ಟುಬಿಡುತ್ತಾರೆ. ಪ್ರೌಢಶಾಲೆಗಳ ಅಲ್ಪ ಶಿಕ್ಷಣದ ಆಧಾರದ ಮೇಲೆ ಕಾಲೇಜುಗಳ ಹಿಂದೀ ಪಠ್ಯಕ್ರಮ ರೂಪುಗೊಂಡಿರುವುದರಿಂದ ಅದು ತೀರಹಗುರದ್ದಾಗಿರುತ್ತದೆ. ಸಹಜವಾಗಿಯೇ